ತಟ್ಟೆಯ ತುಂಬ ಹಣ್ಣು ಹಂಪಲನ್ನು ಓರಣವಾಗಿ ಜೋಡಿಸಿಕೊಂಡು ಕೋಣೆಗೆ ಬಂದು ಪ್ರೇಯಸಿಯನ್ನು ಕಂಡು "ಬಾ ಅತ್ತಿಮಬ್ಬೆ" ಎಂದು ನಾಗದೇವ ಸಡಗರದಿಂದ ಸ್ವಾಗತಿಸಿದಾಗ ಆಕೆ ಪಕ್ಕನೆ ನಕ್ಕು "ಸರಿಯಾಗಿ ನೋಡಿ. ನಾನಾರೋ ಯೋಚಿಸಿ" ಎಂದು ನಾಟ್ಯದ ಭಂಗಿಯಲ್ಲಿ ನಿಂತುಕೊಂಡಳು . ನಾಗದೇವ ಬಿಡುಗಣ್ಣನಾಗಿ ಆಕೆಯನ್ನು ಅಡಿಯಿಂದ ಮುಡಿತನಕ ನೋಡಿದನು. ಆ ಸೌಂದರ್ಯರಾಶಿಯನ್ನು ಬಾಚಿಬಾಚಿ ತಬ್ಬಿಕೊಂಡು ನಲಿದಾಡಬೇಕೆನಿಸಿತು.

"ಅಲ್ಲ, ಮಿಕಿಮಿಕಿ ನೋಡುತ್ತಿರುವಿರಲ್ಲ. ದೃಷ್ಟಿಯಾದರೆ?"

"ನಿನ್ನನ್ನು ಎಷ್ಟು ನೋಡಿದರೂ ನನಗೆ ದೃಷ್ಟಿಯಾಗುವುದಿಲ್ಲ."

"ದೃಷ್ಟಿಯಾಗುವುದು ತಮಗಲ್ಲ ನನಗೇನೆ" ಎಂದು ಆಕೆ ಕೈಯಲ್ಲಿದ್ದ ಚಿನ್ನದ ಹರಿವಾಣವನ್ನು ಅಲ್ಲಿಟ್ಟು ಮತ್ತೆ ಹಿಂದಿರುಗಿ ಹೋದಳು. ಅರೆಚಣ ಬಿಟ್ಟು ಚಿನ್ನದ ಚಂಬಿನಲ್ಲಿ ಹಸುವಿನ ಹಾಲನ್ನು ಹಿಡಿದುಕೊಂಡು ಕನ್ಯಾಮಣಿ ನಾಗದೇವನ ಬಳಿ ಸುಳಿದಾಗ ಅವಳ ಕೈಯನ್ನು ಜಗ್ಗಿ ಸೆಳೆದು.

"ಗುಂಡು, ನೀನು ಹೊರಟೇಹೋದೆ ಎಂದುಕೊಂಡೆ. ಸದ್ಯ ಮತ್ತೆ ಹಿಂದಿರುಗಿದೆಯಲ್ಲ. ನನ್ನ ಪುಣ್ಯ" ಎಂದು ನಾಗದೇವ ಮೃದುವಾಗಿ ಅವಳ ಕೆನ್ನೆಯನ್ನು ಚಿವುಟಿದನು. ಆಕೆ ಮುಗುಳ್ನಗುತ್ತ "ನಾನು ಗುಂಡುಮಬ್ಬೆಯೇ?" ಸರಿಯಾಯಿತು ! ಹೆಂಡತಿಯನ್ನೂ ಗುರುತುಹಿಡಿಯದ ಗಂಡಸರು ತಾವು !" ಎಂದು ಹಾಸ್ಯಮಾಡಿದಳು.

"ಈಗತಾನೇ ಬಂದಿದ್ದೆ. ಅತ್ತಿಮಬ್ಬೆ ಎಂದುದಕ್ಕೆ ಅಲ್ಲವೆಂದೆ. ಈಗ ಗುಂಡುಮಬ್ಬೆಯೆಂದರೂ ಅಲ್ಲವೆನ್ನುವೆ. ನಿಮ್ಮಿಬ್ಬರನ್ನೂ ಒಟ್ಟಿಗೆ ಕೂರಿಸಿಕೊಂಡು ಗುರುತು ಹಿಡಿಯಲು ಏನಾದರೂ ಮಾಡಬೇಕಲ್ಲ !"

"ಏನು ಮಾಡುವಿರೋ ಹೇಳಿ" ಆಕೆ ಸೋಜಿಗಗೊಂಡವಳಂತೆ ನಟಿಸಿದಳು.

"ಇಬ್ಬರದೂ ಒಂದೇ ಆಕಾರ! ಒಂದೇ ಬಣ್ಣ ! ಒಂದೇ ನಿಲುವು ! ಇಬ್ಬರು ನಕ್ಕಾಗಲು ಕೆನ್ನೆಯಲ್ಲಿ ಮಂದಹಾಸದ ಸುಳಿಯಂತೆ ಗುಣಿಬೀಳುವುದು. ನಿಮ್ಮ ಮನೆಯಲ್ಲಾದರು ಹೇಗೆ ಗುರುತಿಸುವರೋ ಏನೋ" ಎಂದು ನಾಗದೇವ ತುಟಿಕಚ್ಚಿ ಕೊಂಡನು.

"ಅದಿರಲಿ ನಮಗೆ ಏನಾದಲೂ ಗುರುತುಮಾಡಬೇಕೆಂದಿರಲ್ಲಾ ಅದನ್ನೇ ಮರೆತು ನಮ್ಮನ್ನು ಬಣ್ಣಿಸುತ್ತಿರುವಿರಿ !"

"ಅಹುದು ನಿನ್ನ ರೂಪರಾಶಿಯ ಮುಂದೆ ನನಗೆ ಮಂಕು ಕವಿದು ಹೋಗಿದೆ" ಎಂದು ನಾಗದೇವ ಬೆಪ್ಪಾದನು.

"ನಿಜವಾಗು !" ಎಂದು ಆಕೆ ಸೋಜಿಗಗೊಂಡಳು.

"ನಿಮ್ಮಿಬ್ಬರಿಗೂ ಅಚ್ಚೆಹೊಯ್ಸಿಬಿಡಬೇಕು" ಎಂದು ನಾಗದೇವ ಸಂಶೋಧನೆ ಯೆಸಗಿದವನಂತೆ ನುಡಿದನು.

"ತಾವು ನಿಜವಾಗು ಮೇಧಾವಿಗಳು !"

"ಏಕೆ ನನ್ನ ಸಂಶೋಧನೆ ಸರಿಯಾಗಿಲ್ಲವೆ? ನಿನ್ನ ಹಣೆಯಲ್ಲಿ ನಿನ್ನ ಹೆಸರನ್ನು ಬರೆಸಿ ಇನ್ನೊಬ್ಬಳ ಹಣೆಯಲ್ಲಿ ಅವಳ ಹೆಸರನ್ನೂ ಬರೆಸಿಬಿಟ್ಟರೆ ನೀವು ಬರುತ್ತಿದ್ದಂತೆ ನಾನು ನಗುನಗುತ್ತ ಹೆಸರು ಹಿಡಿದು ಕರೆದು, ಕೈ ಹಿಡಿದು ಎಳೆದು, ಪಕ್ಕದಲ್ಲಿ  ಕೂರಿಸಿಕೊಂಡು. ನನ್ನ ಚಿನ್ನ, ನನ್ನ ರನ್ನ ಎಂದು ಮುದ್ದಾಡಿದರೆ ಏನು ಸೊಗಸಾಗಿರುವುದು !" ಎಂದು ನಾಗದೇವ ಹಗಲುಗನಸು ಕಂಡವನಂತೆ ಹಿಗ್ಗಿ ಹಿಗ್ಗಿ ನುಡಿದನು.

"ಅಲ್ಲ, ಮುಖ್ಯ ವಿಷಯವನ್ನು ತೊರೆದು ಬಹುದೂರ ಹೋದಿರಿ."

"ಇಲ್ಲವಲ್ಲ, ಮುಖ್ಯ ವಿಷಯ ಬಗೆಹರಿಯಿತು. ಅದರ ಅಂಗವಾಗಿ ಉಳಿದುದೆಲ್ಲ ತಾನಾಗೇ ಬಂದಿತು" ಎಂದು ಸಮಸ್ಯೆ ಪರಿಹಾರವಾದವನಂತೆ ಮಾತಾಡಿದನು. ನಿಂತಿದ್ದಾಕೆ ತಾನೂ ಕುಳಿತುಕೊಂಡಳು. ಅಚ್ಚೆ ಇಬ್ಬರಿಗೂ ಹೊಯ್ಸುವಿರೋ ಒಬ್ಬರಿಗೇ ಸಾಕೋ?" ಆಕೆ ಹುಸಿನಗು ನಗುತ್ತ ಬೆಸಗೊಂಡಳು.

"ಹೊಯ್ದಿದ ಮೇಲೆ ಇಬ್ಬರಿಗೂ ಹೊಯ್ದಿಬಿಡಬೇಕು" ಎಂದು ನಾಗದೇವ ತನ್ನ ಸಂಶೋಧನೆಯನ್ನು ಸ್ಪಷ್ಟಪಡಿಸಿದನು.

"ನೋಡಿ, ನಮಗೆ ಗಣಿತ ಹೇಳಿಕೊಡಲು ಒಬ್ಬ ಓಜರನ್ನು ನೇಮಿಸಿದ್ದರು. ಅವರು ಗಣಿತಶಾಸ್ತ್ರ ಪ್ರವೀಣರೆಂದು ಹೆಸರು ಪಡೆದಿದ್ದರು. ಅಂಥವರ ಬಳಿ ನಾವು ಗಣಿತಶಾಸ್ತ್ರವನ್ನು ಕಲೆತವು. ನಾವು ಒಂದು ಬೆಕ್ಕನ್ನೂ ಅದರ ಮರಿಯನ್ನೂ ಮುದ್ದಾಗಿ ಸಾಕಿದ್ದೆವು. ನಮ್ಮ ಓಜರು ಲೆಕ್ಕ ಹೇಳುವಾಗ ಕೋಣೆಯ ಬಾಗಿಲನ್ನು ಮುಂದಕ್ಕೆ ದಬ್ಬಿ ಕುಳಿತು ಕೊಂಡರೆ ಬೆಕ್ಕುಗಳು ಬಂದು ಮಿಯಾವ್ ಮಿಯಾವ್ ಎಂದು ಕೂಗಿ ಅವಾಂತರವೆಬ್ಬಿಸುತ್ತಿದ್ದವು. ಒಂದು ದಿನ ಓಜರು ರೋಸಿ ಬಡಗಿಯನ್ನು ಕರೆದು ಬಾಗಿಲಿನಲ್ಲಿ ಎರಡುರಂಧ್ರ ಮಾಡಿಸಿದರು. ಒಂದು ದೊಡ್ಡದ್ದು ಇನ್ನೊಂದು ತುಸು ಚಿಕ್ಕದು. ಮರುದಿನ ನಾವು ಓಜರೇ, ರಂಧ್ರ ಒಂದೇ ಸಾಕಾಗಿತ್ತಲ್ಲ ಎಂದೆವು. 'ನೀವು ಹುಡುಗರು. ಲೆಕ್ಕಾಚಾರವೇ ನಿಮಗೆ ತಿಳಿದಿಲ್ಲ. ದೊಡ್ಡ ಬೆಕ್ಕಿಗೆ ದೊಡ್ಡ ರಂಧ್ರ, ಚಿಕ್ಕ ಬೆಕ್ಕಿಗೆ ಚಿಕ್ಕ ರಂಧ್ರ' ಎಂದು ಗಂಭೀರವಾಗಿ ನುಡಿದರು. 'ಓಜರೇ ದೊಡ್ಡರಂಧ್ರದಲ್ಲಿ, ಚಿಕ್ಕಬೆಕ್ಕು ತೂರಲಾರದೆ!' ಎಂದು ನಾವು ಕೇಳಿದಾಗ ಅವರಿಗೆ ಸಿಟ್ಟು ಬಂದು 'ನನ್ನನ್ನು ಏನೆಂದುಕೊಂಡಿರಿ !' ಎಂದು ಗಂಭೀರವಾಗಿ ನುಡಿದರು. 'ಓಜರೇ ದೊಡ್ಡರಂಧ್ರದಲ್ಲಿ, ಚಿಕ್ಕಬೆಕ್ಕು ತೂರಲಾರದೆ !' ಎಂದು ನಾವು ಕೇಳಿದಾಗ ಅವರಿಗೆ ಸಿಟ್ಟು ಬಂದು 'ನನ್ನನ್ನು ಏನೆಂದುಕೊಂಡಿರಿ ! ಚಾಲುಕ್ಯ ಮಹಾರಾಜರು ನನಗೆ ಗಣಿತಶಾಸ್ತ್ರ ವಿಶಾರದನೆಂದು ಬಿರುದುಕೊಟ್ಟಿರುವರು' ಎನ್ನುತ್ತ ತಮ್ಮ ಕಿಸೆಯಲ್ಲಿದ್ದ ಬಂಗಾರದ ಬಿಲ್ಲೆಯ ಬಿರುದನ್ನು ತೆಗೆದು ನಮಗೆ ತೋರಿಸಿ ಪರ್ವತವನ್ನು ಕಿತ್ತುಹೊತ್ತುಕೊಂಡು ಬಂದವರಂತೆ ಹೆಮ್ಮೆಯಿಂದ ತೂಗಾಡಿದರು. ಆ ವೇಳೆಗೆ ದೊಡ್ಡ ಬೆಕ್ಕು ದೊಡ್ಡರಂಧ್ರದಲ್ಲಿ ತೂರಿತು. ಅದರ ಹಿಂದೆಯೇ ಮರಿಯೂ ಅದೇ ರಂಧ್ರದಲ್ಲಿ ತೂರಿಬಂದು ನನ್ನ ತೊಡೆಯಮೇಲೆ ಕುಳಿತುಕೊಂಡಿತು. ನಾವು ಪಕ್ಕನೇ ನಕ್ಕೆವು. ಓಜರಿಗೆ ಸಿಟ್ಟೇರಿತು! 'ಹಾಳು ಬೆಕ್ಕುಗಳು ನಿಮ್ಮಂತೆ ತಿಳಿಗೇಡಿಗಳು ! ನನ್ನ ಮಹಾ ಯೋಜನೆಯನ್ನು ಗ್ರಹಿಸುವ ಯೋಗ್ಯತೆ  ಇವಕಿಲ್ಲ' ಎಂದ್ೂ ಒದರಾಡಿದರು" ಎಂದು ಆಕೆ ನಗುತ್ತಾ ಕುಳಿತಳು.

"ಉಪಾಧ್ಯಾಯರಿಗೆ ಸ್ವಲ್ಪವಾದರೂ ವ್ಯವಹಾರ ಜ್ಞಾನವಿಲ್ಲ" ಎಂದು ನಾಗದೇವ ತಿರಸ್ಕಾರದಿಂದ ನುಡಿದನು.

"ಅವರಿಗಿಲ್ಲದಿದ್ದರೆ ಹೋಗಲಿ ತಮಗಾದರೂ ಇದೆಯಲ್ಲ !" ಎಂದು ಆಕೆ ಮುಗುಳ್ನಕ್ಕಳು.

"ವ್ಯವಹಾರ ನನಗೆ ಕರಾತಲಾಮಲಕ."

"ಅದರಿಂದಲೇ ಇಬ್ಬರಿಗೂ ಅಚ್ಚೆ ಹೊಯ್ಸಿಬಿಡಬೇಕೆಂದು ಯೋಜನೆ ಹಾಕಿದಿರಲ್ಲ ! "

"ಇಬ್ಬರಿಗೂ ಹೊಯ್ಸಿ ಬಿಡಬೇಲು. ನನಗೆ ಸರಳವಾಗುವುದು" ಮತ್ತೆ ದೃಢಪಡಿಸಿದನು.

"ಅಲ್ಲರೀ ನಮ್ಮಲ್ಲಿ ಒಬ್ಬರಿಗೆ ಹೊಯ್ಸಿದರೆ ಸಾಲದೆ? ಅನಂತರ ಇನ್ನೊಬ್ಬಳನ್ನು ಗುರುತು ಹಿಡಿಯುವುದಕ್ಕಾರುವುದಿಲ್ಲವೆ?" ಎಂದು ಆಕೆ ಚಪ್ಪಾಳೆ ತಟ್ಟಿ ನಗೆಯಾಡಿದಳು.

"ಇನ್ನೊಬ್ಬಳನ್ನು ಹೇಗೆ ಗುರುತು ಹಿಡಿಯಬಹುದು?"

"ತಾವೂ ನಮ್ಮ ಗಣಿತಶಾಸ್ತ್ರ ಪ್ರವೀಣರ ತಮ್ಮಂದಿರಾಗಿರುವಿರಿ ?" ಎಂದು ಆಕೆ ನುಡಿದಾಗ ನಾಗದೇವನಿಗೆ ಸತ್ಯ ಹೊಳೆಯಿತು. ಅವನೂ ಅವಳೊಡನೆ ನಕ್ಕುಬಿಟ್ಟನು. ಆ ವೇಳೆಗೆ ಇನ್ನೊಬ್ಬಾಕೆಯೂ ಬಂದು ಇವನ ಇನ್ನೊಂದು ಪಕ್ಕದಲ್ಲಿ ಕುಳಿತುಕೊಂಡಳು. ನಾಗದೇವನ ಆನಂದಕ್ಕೆ ಪಾರವೇ ಇಲ್ಲ. ಎತ್ತ ತಿರುಗಿದರೂ ಸೌಂದರ್ಯರಾಶಿಯೇ ! ಒಬ್ಬಳನ್ನು ನೋಡುವುದಕ್ಕೇ ಎರಡು ಕಣ್ಣು ಸಾಲದು. ಆದರಿಲ್ಲಿ ಇಬ್ಬರನ್ನೂ ಹೇಗಪ್ಪ ನೋಡುವುದು ಎಂದು ಚಡಪಡಿಸಿದನು. ಎಳಲತೆಗೆ ಬೆಳದಿಂಗಳನ್ನು ಉಡಿಸಿದಂತೆ ನವಿರಾದ ಉಡುಗೆಯನ್ನು ತೊಟ್ಟು ಈ ಲಾವಣ್ಯಾಂಗಿಯರು ಕಂಗೊಳಿಸಿದರು ! ಇವನ ಕೈ ಎತ್ತ ಚಾಚಿದರೂ ಚಲುವಿನಾಗರ ! ಕತ್ತುರಿಯಲ್ಲಿ ಮಸೆದ ಕುಸುಮಶರದಂತೆ ಈ ಕುಸುಮಾಂಗಿಯರು ರಾರಾಜಿಸಿದರು! ಬೆಳದಿಂಗಳನ್ನೇ ಎರಕಹೊಯ್ದು ಮಾಡಿದ ಪುತಲ್ಲಿಗಳಂತೆ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ತೊಳಗುವರು. ಮಂದಮಾರುತದೊಡನೆ ಚಿಕ್ಕಂದವಾಡುವಂತೆ ನಾಗದೇವ ಈ ಮಂದ ಗಾಮಿನಿಯರೊಡನೆ ನಲಿದಾಡಿದನು. ಹಿಮ್ಮಡಿಯ ತನಕ ಜೋತುಬಿದ್ದ ನಾಗವೇಣಿಗಳನ್ನು ಹಿಡಿದು ಚಲ್ಲಾಟವಾಡಿದನು. ಅತ್ತ ಇತ್ತ ಅವರಿಬ್ಬರೂ ಒತ್ತಿ ಇವನನ್ನು ಆಟವಾಡಿಸಿದರು. ಇವನ ಭುಜಕ್ಕೆ ತಲೆಯಾಯಿಸಿದಾಗ ಇವನು ತನ್ನ ಕೈಗಳಿಂದ ಇಬ್ಬರ ತಲೆಯನ್ನೂ ನೇವರಿಸಿ ರೋಮಾಂಚನಗೊಳಿಸಿದನು !

ಕವಿ ಕವಿಚಕ್ರವರ್ತಿ ಕೃತಿನಾಯಕನಾ ಜಿನಚಂದ್ರದೇವನು ।

ತ್ಸವನಿಧಿ ಮಲ್ಲಪಾಯನುಮುದಾತ್ತ ಯಶೋನಿಧಿ ಪುನ್ನಮಾರ್ಯನುಂ ॥

ಸವಿ ತವದಂತು ಪೇಳಿಸಿದರೆಂದೊಡೆ ಶಾಂತಿಪುರಾಣಮೇಂ ಕರಂ ।

ನವರಸಮೇಂ ಸಮರ್ಥ ಯುತಮೇಂ ಮೃದು ಬಂಧನಮೇಂ ಪ್ರಸನ್ನಮೋ ॥

ಉಪಮಾತೀತಂ ಕೃತಿ ಶಾಂ ।

ತಿಪುರಾಣಂ ಸಲೆ ಪುರಾಣಚೂಡಾಮಣಿ ಯೆಂ ॥

ದುಪಶಮದಿಂದ ಬರೆಯಿಸಿ ಮ ।

ಲ್ಲಪಯ್ಯನುಂ ಪುನ್ನಮಯ್ಯನುಂ ಪರೆಯಿಸಿದರ್ ॥

ಶಾಂತಿಪುರಾಣಮನಿದ ನೋ ।

ರಂತಿರೆ ಬರೆಯಿಸುವ ಕೂಡೆ ಪರೆಯಿಸುವ ಜಸ ॥

ಕ್ಕಿಂತಾರ್ ನೋಂತರಿದೇಂ ಗುಣ ।

ವಂತನಿದೇಂ ಪುರುಸರನ್ನನೋ ಗಡ ಪೊನ್ನಂ ॥

ಭೂಮಿಗೆ ಕಾವ್ಯ ರತ್ನಮಿದೆ ಸಾರಮೆನಲ್ ನೆಗಳ್ದೀಪುರಾಣಚೂ ।

ಡಾಮಣಿ ಗಳ್ತಿಯಿಂ ಕಳಸ ಮಿಟ್ಟು ಗುರುಸ್ಥಿರ ಭಕ್ತಿ ಪೂರ್ವಕಂ ॥

ಪ್ರೇಮದೆ ಮಲ್ಲಪಯ್ಯನು ಮುದಾತ್ತ ಯಶೋನಿಧಿ ಪುನ್ನಮಯ್ಯನುಂ ।

ತಾಮುಪಕಾರಮಂ ನೆರಪಿದರ್ ಜಗದೊಳ್ ಜಿನಚಂದ್ರದೇವರಾ ॥